ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು–560 001.

ಲೋಕೋಪಯೋಗಿ ಇಲಾಖೆ

ದೂರವಾಣಿ ಸಂಖ್ಯೆ: 080–22267585
ಇ–ಮೇಲ್: aeeno4bldg@gmail.com

ಸಂ: ಸಕಾಅ/ಕಉವಿ–4/ಕಿ.ಇಂ/ಕ.ದೃಢೀಕರಣ ಪತ್ರ/2023–24/646

ದಿನಾಂಕ: 22/09/2023

ರವರಿಗೆ,

The Secretary,
Jalahalli Education Society,
MES Ring Road, Jalahalli,
Near BEL Cricle,
Bangalore – 560 013.

ಮಾನ್ಯರೆ,

ವಿಷಯ: ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ: 1. ತಮ್ಮ ಮನವಿ ಪತ್ರ ದಿನಾಂಕ: 21.08.2023
2. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ: ಲೋಇ 59 ಬಿಇಡಿ 2019 ಬೆಂಗಳೂರು ದಿ: 06.05.2022

<<<<<>>>>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ Jalahalli Education Society, MES Ring Road, Jalahalli, Near BEL Cricle, Bangalore – 560 013 ಇಲ್ಲಿನ ವಿದ್ಯಾಸಂಸ್ಥೆಯ ವತಿಯಿಂದ ನಡೆಸುತ್ತಿರುವ ಮದರ್ ತೆರೇಸಾ ಪಬ್ಲಿಕ್ ಶಾಲೆಯ (CBSE) ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಉಲ್ಲೇಖ (1) ರ ಪತ್ರದಲ್ಲಿ ಮನವಿ ಸಲ್ಲಿಸಿರುತ್ತೀರಿ.

ಅದರಂತೆ, Jalahalli Education Society, MES Ring Road, Jalahalli, Near BEL Cricle, Bangalore – 560 01 ಇಲ್ಲಿನ CBSE ಪಠ್ಯಕ್ರಮ ಶಾಲಾ ಕಟ್ಟಡವನ್ನು ದಿನಾಂಕ: 13.09.2023 ರಂದು ಸಂಬಂಧಪಟ್ಟ ಇಂಜಿನಿಯರ್ ಹಾಗೂ ಪರವಾನಗಿ ಅಧಿಕಾರಿಯಾದ ಶ್ರೀಮತಿ. ಮಮತ ಕೆ.ಎನ್ ರವರೊಂದಿಗೆ ಕಟ್ಟಡದ ಒಳಭಾಗ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ, ಸದರಿ ಕಟ್ಟಡವು ತಳ, ನೆಲ ಮಹಡಿಯೊಂದಿಗೆ ಮೂರು ಅಂತಸ್ತಿನ ಆರ್.ಸಿ.ಸಿ. ಕಟ್ಟಡವನ್ನು ಹೊಂದಿದ್ದು, ಸದರಿ ಕಟ್ಟಡವನ್ನು 2006 ರಿಂದ ಹಂತ ಹಂತವಾಗಿ ನಿರ್ಮಾಣ ಮಾಡಲಾಗಿರುತ್ತದೆ ಎಂದು ಪರಿವೀಕ್ಷಣೆ ಸಮಯದಲ್ಲಿ ತಿಳಿಸಿರುತ್ತೀರಿ. ಕಟ್ಟಡವು ವಿಟ್ರೀಫೈಡ್ & ಗ್ರಾನೈಟ್ ನೆಲಹಾಸು, ಅಲ್ಯೂಮಿನಿಯಂ ಕಿಟಕಿ ಮತ್ತು ಮರದ ಬಾಗಿಲುಗಳನ್ನು ಅಳವಡಿಸಲಾಗಿರುತ್ತದೆ. ಸದರಿ ಕಟ್ಟಡದಲ್ಲಿ ಒಟ್ಟು 20 ಕ್ಲಾಸ್ ರೂಂ ನೊಂದಿಗೆ 06 ಇತರೆ ಕೊಠಡಿಗಳೊಂದಿಗೆ ಶೌಚಾಲಯಗಳನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ.

ಕಟ್ಟಡಕ್ಕೆ ಸಂಬಂಧಪಟ್ಟ ಕಾಂಕ್ರೀಟ್ ಗ್ರೇಡ್, ಸ್ಟೀಲ್, ಸಿಮೆಂಟ್, ಮರಳು ಇತ್ಯಾದಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಳವಡಿಸುವ ಸಾಮಾಗ್ರಿಗಳ ಪರೀಕ್ಷೆ ವರದಿಗಳು ಇಲ್ಲದಿರುವ ಕಾರಣದಿಂದ ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಎರಡು ರೀತಿಯ Non Destructive test ಗಳನ್ನು ಕೈಗೊಳ್ಳಲಾಗಿರುತ್ತದೆ.

ಮುಂದುವರೆದು, Bangalore University Department of Civil Engineering (U.V.C.E) ರವರಿಂದ Form for certificate for Structural Design Sufficiency Report (Annex –C Clause 12.2.8), Ultrasonic pulse velocity test report ಮತ್ತು Rebound Hammer Test ಗಳನ್ನು ಯು.ವಿ.ಸಿ.ಇ. ಬೆಂಗಳೂರು ವಿಶ್ವವಿದ್ಯಾಲಯ, ಸಿವಿಲ್ ಇಂಜನಿಯರ್ ವಿಭಾಗದ Professor Dr. N. Jayaramappa, B.E (Civil), ME(Str), Ph.D. ರವರಿಂದ ಪರೀಕ್ಷಿಸಿ ವರದಿ ನೀಡಿರುತ್ತಾರೆ.

ಸದರಿ ಪರೀಕ್ಷಾ ವರದಿಯಲ್ಲಿ the building is Safe for occupancy as per volume1 of "National Building Code of India 2016 guidelines and available standard code of practise" ಎಂದು ದೃಢೀಕರಿಸಿರುತ್ತಾರೆ.

**ತಾವುಗಳು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಿರುತ್ತೀರಿ.**

1. Ultrasonic Pulse Velocity Test Report
2. Rebound Hammer Test result.

ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2) ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ / ಕಾಲೇಜಿಗೆ – ರೂ. 5,000.00 ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಸಂಸ್ಥೆಯವರು ಚಲನ್ ಉಲ್ಲೇಖ ಸಂಖ್ಯೆ: CR0923005900416896 dtd. 22.09.2023 ರಲ್ಲಿ ಪಾವತಿಸಿರುತ್ತಾರೆ.

ಸದರಿ ಶಾಲಾ ಕಟ್ಟಡದ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು. ಆದರೆ, ಕಟ್ಟಡದ ಗೋಡೆಗಳಲ್ಲಿ ಮತ್ತು ಮೇಲ್ಚಾವಣಿಯಲ್ಲಿ ಕಂಡುಬಂದಿರುವ Dampness, ಕಟ್ಟಡದ ಕೆಲ ಭಾಗಗಳಲ್ಲಿ ಕಂಡುಬಂದಿರುವ ಬಿರುಕುಗಳು, ಟೇರೇಸ್‌ನಲ್ಲಿರುವ ಕಂಬದ ಕಂಬಿಗಳಿಗೆ ಲೀನ್ ಕಾಂಕ್ರೀಟ್ ಅಥವಾ ಡಮ್ಮಿ ಕಾಂಕ್ರೀಟ್‌ನಿಂದ ಮುಚ್ಚುವುದು ಹಾಗೂ ಇತರೆ ನ್ಯೂನತೆಗಳಿಗೆ ನಿಖರ ಕಾರಣಗಳನ್ನು ಕಂಡುಹಿಡಿದು ತಕ್ಷಣವೇ ಕ್ರಮ ಕೈಗೊಳ್ಳುವುದು ಮತ್ತು ಕಟ್ಟಡದ ನಿರ್ವಹಣೆ ಮಾಡುವ ಜವಾಬ್ದಾರಿಯು ಸದರಿ ವಿದ್ಯಾಸಂಸ್ಥೆಯವರದಾಗಿರುತ್ತದೆ ಹಾಗೂ ಈ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

ಮುಂದಿನ ದಿನಗಳಲ್ಲಿ ಕಟ್ಟಡದಲ್ಲಿ ಯಾವುದಾದರೂ ಬದಲಾವಣೆ ಅಥವಾ ಹೆಚ್ಚುವರಿಯಾಗಿ ನಿರ್ಮಾಣ ಮಾಡಿದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದು. ಅದ್ದರಿಂದ ಸದರಿ ಪ್ರಮಾಣ ಪತ್ರವನ್ನು Jalahalli Education Society, MES Ring Road, Jalahalli, Near BEL Cricle, Bangalore – 560 01 ಇಲ್ಲಿನ ವಿದ್ಯಾಸಂಸ್ಥೆಯ ವತಿಯಿಂದ ನಡೆಸುತ್ತಿರುವ ಮದರ್ ತೆರೇಸಾ ಪಬ್ಲಿಕ್ CBSE ಪಠ್ಯಕ್ರಮ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/-
ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ. 4, ಕಟ್ಟಡಗಳ ಉಪವಿಭಾಗ,
ಬೆಂಗಳೂರು

ಪ್ರತಿಯನ್ನು ಈ ಕಛೇರಿಯ ಆಡಳಿತ ಶಾಖೆಯ ಮಾಹಿತಿಗಾಗಿ

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ. 4, ಕಟ್ಟಡಗಳ ಉಪವಿಭಾಗ,
ಬೆಂಗಳೂರು.